ಕರ್ನಾಟಕ ಸರಕಾರ

ಜಿಲ್ಲಾ ಪಂಚಾಯತ್, ರಾಯಚೂರು.

# ಗ್ರಾಮ ಪಂಚಾಯತ್ ಕಾರ್ಯಾಲಯ, ಬಿಜನಗೇರ

## ತಾ: ಜಿ: ರಾಯಚೂರು

---

ದಿನಾಂಕ: 11-05-2020

ಸ್ಥಳ: ಬಿಜನಗೇರಾ

ಇವರಿಗೆ,

ಶ್ರೀ ಕೆ.ಎಸ್.ಈಶ್ವರಪ್ಪ

ಮಾನ್ಯ ಸಚೀವರು,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ,

ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು

**ವಿಷಯ: ಗ್ರಾಮ ಪಂಚಾಯತ್‌ಗಳಿಗೆ ಆಡಳಿತಾಧಿಕಾರಿಗಳು ಅಥವಾ ಆಡಳಿತ ಸಮಿತಿಯ ನೇಮಕದ ಬದಲಿಗೆ ಹಾಲಿ ಇರುವ ಚುನಾಯಿತ ಪ್ರತಿನಿಧಿಗಳನ್ನೇ ಚುನಾವಣೆ ನಡೆಯುವವರೆಗೆ ಮುಂದುವರೆಸುವ ಬಗ್ಗೆ ಒತ್ತಾಯಿಸಿ ಪತ್ರ**

ಇಡೀದೇಶಾದ್ಯಂತ ವ್ಯಾಪಕವಾಗಿ ಹರಡುತ್ತಿರುವಕೋವಿಡ್- 19ರ ಪರಿಣಾಮಕರ್ನಾಟಕದ ಮೇಲೂ ಆಗಿರುವುದರಿಂದರಾಜ್ಯದಲ್ಲಿನ ಆಡಳಿತ ವ್ಯವಸ್ಥೆಯಲ್ಲಿ ವಿವಿಧರೀತಿಯ ಬದಲಾವಣೆಗಳಾಗಿವೆ. ಇದರ ಪರಿಣಾಮ, ಕರ್ನಾಟಕದಲ್ಲಿ,ಇದೇ ಮೇ ತಿಂಗಳ ಅಂತ್ಯದೊಳಗೆ ನಡೆಯಬೇಕಿದ್ದಗ್ರಾಮ ಪಂಚಾಯತ್‌ಚುನಾವಣೆಯ ಮೇಲೂ ಉಂಟಾಗಿದೆ. ಈ ಕೋವಿಡ್-19ರ ಸಂಕಷ್ಟದ ಸಮಯದಲ್ಲಿಚುನಾವಣೆಯಂತಹಕಾರ್ಯವನ್ನು ಕೈಗೆತ್ತಿಕೊಳ್ಳುವುದು ಅಸಾಧ್ಯವೇ ಸರಿ. ಈ ಹಿನ್ನೆಲೆಯಲ್ಲಿರಾಜ್ಯ ಸರ್ಕಾರ ಈಗಾಗಲೇ ಹೇಳಿರುವಂತೆ ಸುಮಾರು 6 ತಿಂಗಳುಗಳ ಕಾಲ ಚುನಾವಣೆ ಮುಂದೂಡಬೇಕಾಗಿರುವುದು ಅನಿವಾರ್ಯವಾಗಿದೆ. **ಆದರೆ ಆಡಳಿತಾಧಿಕಾರಿಯ ನೇಮಕ ಅಥವಾ ಬೇರ್‍ಯಾವುದೋಉಸ್ತುವಾರಿ ಸಮಿತಿ ನೇಮಕ ಮಾಡುವ ಸರ್ಕಾರದ ಆಲೋಚನೆ ಕಾನೂನಿನಲ್ಲಿಅವಕಾಶವಿದ್ದರೂ ಈ ವಿಕೋಪದ ಪರಿಸ್ಥಿತಿ ಇರುವಾಗಸೂಕ್ತವಾದುದಲ್ಲ.**

ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸರ್ಕಾರದರಥದಎರಡು ಗಾಲಿಗಳಿದ್ದಂತೆ. ಸರ್ಕಾರದರಥ ಮುನ್ನಡೆಸುವಲ್ಲಿಇಬ್ಬರ ಪಾತ್ರವೂ ಬಹಳ ಪ್ರಮುಖವಾದುದು.ಗ್ರಾಮ ಪಂಚಾಯತ್‌ಒಂದು ಸ್ಥಳೀಯ ಸ್ವಯಂ ಸರ್ಕಾರ. **ಹೀಗಾಗಿಯೇಇಡೀರಾಜ್ಯದಾದ್ಯಂತ ಕೋವಿಡ್-19ರ ಪರಿಸ್ಥಿತಿ ಘೋಷಣೆಯಆದಾಗ ಮೊಟ್ಟಮೊದಲು ಸರ್ಕಾರ ಮಾಡಿದ ಕೆಲಸವೆಂದರೆ ಪಂಚಾಯತ್ ವ್ಯಾಪ್ತಿಯಲ್ಲಿಕಾರ್ಯನಿರ್ವಹಿಸುವ ಎಲ್ಲಾ ಇಲಾಖೆಗಳ, ಸ್ವಯಂಸೇವಾ ಸಂಸ್ಥೆಗಳ, ಸ್ವಯಂಸೇವಕರ ಸಂಯೋಜನೆಯಲ್ಲಿಜಾರಿ ಪಡೆ (ಕಾರ್ಯಪಡೆ) ರೂಪಿಸಿ ಇಡೀ ಪಂಚಾಯತ್‌ನ ವಿಕೋಪ ನಿರ್ವಹಣೆಯಜವಾಬ್ದಾರಿಯ ನೇತೃತ್ವವನ್ನುಗ್ರಾಮ ಸರ್ಕಾರಕ್ಕೆ ನೀಡಿದ್ದು.** ಚುನಾಯಿತ ಪ್ರತಿನಿಧಿಗಳಾದ ನಾವು ಪಂಚಾಯತ್ ಆಡಳಿತದಲ್ಲಿ ಸಕ್ರೀಯವಾಗಿ ಭಾಗವಹಿಸಿ ಅನುಭವ ಪಡೆದುಗ್ರಾಮ ಪಂಚಾಯತ್‌ಅಭಿವೃದ್ಧಿಯಲ್ಲಿನಮ್ಮ ಪಾತ್ರ-ಜವಾಬ್ದಾರಿಗಳ ಮಹತ್ವವನ್ನುಆಳವಾಗಿ ಅರ್ಥೈಸಿಕೊಂಡಿದ್ದರಿಂದ ವಿಕೋಪದ ಪರಿಸ್ಥಿತಿಯನ್ನೂ ಸಹ ನಿಭಾಯಿಸಲು ಸ್ಥಳೀಯ ಸರ್ಕಾರವಾಗಿ ನಮಗೆ ಸಾಧ್ಯವಾಯಿತು. ಈ ಸಂದರ್ಭದಲ್ಲಿಗ್ರಾಮೀಣಜನರ ಅಗತ್ಯತೆಗಳೇನು, ಇಲ್ಲಿನ ಪರಿಸ್ಥಿತಿ ಹೇಗಿದೆ, ಆಗಬೇಕಾದ ಪ್ರಮುಖ ಕಾರ್ಯಗಳೇನು, ಮುಂದಿರುವ ಸವಾಲುಗಳೇನು ಎಂಬುದನ್ನು ಕೂಲಂಕುಷವಾಗಿ ಗಮನಿಸಿದ್ದೇವೆ.

ಒಂದುರೀತಿಯಲ್ಲಿತುರ್ತು ಪರಿಸ್ಥಿತಿಯಂತೆಇರುವ ಈ ಸಮಯದಲ್ಲಿ ನಾವುಸ್ಥಳೀಯ ಸರ್ಕಾರದ ಅವಿಭಾಜ್ಯ ಅಂಗವಾಗಿ, ವಿಕೋಪವನ್ನು ಸಮರ್ಥವಾಗಿ ನಿಭಾಯಿಸುವಲ್ಲಿ, ಜನರ ಸಂಕಷ್ಟಗಳಿಗೆ ಸ್ಪಂದಿಸುವಲ್ಲಿಉತ್ತರದಾಯಿಯಾಗಿಕಾರ್ಯನಿರ್ವಹಿಸಿರುತ್ತೇವೆ. ಚುನಾಯಿತ ವರ್ಗ ಹಾಗೂ ಅಧಿಕಾರಿ ವರ್ಗಒಗ್ಗೂಡಿ ಆಡಳಿತ ನಡೆಸಿರುವುದೇ ಈ ಪರಿಸ್ಥಿತಿಯ ಸಮರ್ಪಕ ನಿರ್ವಹಣೆಗೆ ಪ್ರಮುಖಕಾರಣ. ಈ ವಿಕೋಪದ ಪರಿಸ್ಥಿತಿ ಇನ್ನೂ ಮುಂದುವರಿಯುತ್ತಿರುವಈ **ಸವಾಲಿನ ಸಮಯದಲ್ಲಿ, ಪಂಚಾಯತ್ ಆಡಳಿತಕ್ಕೆ ಕೇವಲ ಆಡಳಿತಾಧಿಕಾರಿಯ ಅಥವಾಉಸ್ತುವಾರಿ ಸಮಿತಿಯ ನೇಮಕ ಅಸಮಂಜಸವಾದುದು.** ತಮ್ಮ ಸರ್ಕಾರದ **ಈ ಆಲೋಚನೆ,** ನಿರ್ಧಾರವನ್ನುತಕ್ಷಣವೇಕೈಬಿಟ್ಟು, **ಪ್ರಸ್ತುತಇರುವಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಿರುವ ಸ್ಥಳೀಯ ಸರ್ಕಾರವನ್ನೇಮಧ್ಯಂತರ ಸ್ಥಳೀಯ ಸ್ವಯಂ ಸರ್ಕಾರವಾಗಿಮುಂದುವರಿಸಬೇಕಾಗಿ ಈ ಮೂಲಕ ಕರ್ನಾಟಕರಾಜ್ಯ ಸರ್ಕಾರವನ್ನು ಒತ್ತಾಯಿಸಿ** ನಮ್ಮ ಪಂಚಾಯತ್‌ನ ಸಾಮಾನ್ಯ ಸಭೆಯ ನಿರ್ಣಯವನ್ನು ಮಂಡಿಸುತ್ತಿದ್ದೇವೆ. ಇದೇ ಪಂಚಾಯತ್‌ನಜನರಿಂದಜನರಿಂದಚುನಾಯಿತರಾದ ನಾವು ಸ್ಥಳೀಯ ಸರ್ಕಾರದ ಭಾಗವಾಗಿನಮ್ಮಗ್ರಾಮದಜನರಿಗೆ, ಗ್ರಾಮದಅಭಿವೃದ್ಧಿಗೆ ಬದ್ಧರಾಗಿದ್ದೇವೆ.

ಇಂತಿ,

ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು **ಬಿಜನಗೇರಾ ಗ್ರಾಮ ಪಂಚಾಯತ್, ರಾಯಚೂರು** ತಾಲೂಕು, ರಾಯಚೂರು ಜಿಲ್ಲೆ

**ಯಥಾ ಪ್ರತಿ:**

- ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಕರ್ನಾಟಕ ಸರ್ಕಾರ
- ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
- ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಕರ್ನಾಟಕ ಸರ್ಕಾರ
- ಗ್ರಾಮ ಪಂಚಾಯತ್ ಹಕ್ಕೊತ್ತಾಯಆಂದೋಲನ, ಕರ್ನಾಟಕ

ಅಧ್ಯಕ್ಷರು

ಗ್ರಾಮ ಪಂಚಾಯತ

ಕರ್ನಾಟಕ ಸರಕಾರ

ಜಿಲ್ಲಾ ಪಂಚಾಯತ್, ರಾಯಚೂರು.

# ಗ್ರಾಮ ಪಂಚಾಯತ್ ಕಾರ್ಯಾಲಯ, ಬಿಜನಗೇರ

## ತಾ: ಜಿ: ರಾಯಚೂರು

| ಕ್ರ.ಸಂ | ಹೆಸರು | ಪದನಾಮ | ಸಹಿ |
|---|---|---|---|
| 01 | ಉಷಾ ಗಂಡ ಸುಂದರರಾಜ | ಅಧ್ಯಕ್ಷರು | |
| 02 | ಲಕ್ಷ್ಮೀ ಗಂಡ ಆಂಜನೇಯ್ಯ | ಉಪಾಧ್ಯಕ್ಷರು | |
| 03 | ರಾಘವೇಂದ್ರ ತಂದೆ ಜಂಬಣ್ಣಗೌಡ | ಸದಸ್ಯರು | |
| 04 | ಮಾರೆಮ್ಮ ಗಂಡ ಮಾರೆಪ್ಪ | ಸದಸ್ಯರು | |
| 05 | ಮುನಿಯಪ್ಪ ತಂದೆ ಚಿನ್ನಯ್ಯ | ಸದಸ್ಯರು | |
| 06 | ಪೋಲಯ್ಯ ತಂದೆ ಜಯಪ್ಪ | ಸದಸ್ಯರು | |
| 07 | ಜಯಲಕ್ಷ್ಮೀ ಗಂಡ ತಿಕ್ಕಯ್ಯ | ಸದಸ್ಯರು | |
| 08 | ನಾಗೇಂದ್ರಮ್ಮ ಗಂಡ ಶಿವರಾಜ | ಸದಸ್ಯರು | |
| 09 | ಪಲ್ಲಯ್ಯ ತಂದೆ ತಾಯಪ್ಪ | ಸದಸ್ಯರು | |
| 10 | ಬಿ.ತಿಮ್ಮಪ್ಪ ತಂದೆ ಗೋವಿಂದಪ್ಪ ಜಗ್ಲಿ | ಸದಸ್ಯರು | |
| 11 | ಸುಜಾತಮ್ಮ ಗಂಡ ನರಸಿಂಹಲು | ಸದಸ್ಯರು | |
| 12 | ವಿರೇಶ ತಂದೆ ದೊಡ್ಡ ಮೂಕಪ್ಪ | ಸದಸ್ಯರು | |
| 13 | ನಾಗರೆಡ್ಡಿ ತಂದೆ ನರಸಯ್ಯ | ಸದಸ್ಯರು | |
| 14 | ಕೃಷ್ಣಪ್ಪ ತಂದೆ ಸಾಯಿಬಣ್ಣ | ಸದಸ್ಯರು | |
| 15 | ರಾಮಲಿಂಗಪ್ಪ ತಂದೆ ಸಿದ್ದಣ್ಣ | ಸದಸ್ಯರು | |
| 16 | ಜನಾರ್ಧನ ತಂದೆ ವೆಂಕಣ್ಣ ಸಾಲಿ | ಸದಸ್ಯರು | |
| 17 | ಲಕ್ಷೀ ಗಂಡ ಹನುಮಯ್ಯ | ಸದಸ್ಯರು | |
| 18 | ಮಾರೆಮ್ಮ ಗಂಡ ರಾಜಪ್ಪ | ಸದಸ್ಯರು | |
| 19 | ಪದ್ಮಾವತಿ ಗಂಡ ನರಸಿಂಹಲು | ಸದಸ್ಯರು | |
| 20 | ಎಸ್.ಮಲ್ಲೇಶ ತಂದೆ ನರಸಿಂಗಪ್ಪ | ಸದಸ್ಯರು | |
| 21 | ಈಶ್ವರಮ್ಮ ಗಂಡ ದೊ.ಹನುಮಂತು | ಸದಸ್ಯರು | |
| 22 | ಲಕ್ಷ್ಮೀ ಗಂಡ ಹನುಮಂತು | ಸದಸ್ಯರು | |